# ವಾರ್ತಾ ಪತ್ರಿಕೆ

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಅಂಚೆ ಸಂ. 06, ಬೀದರ-585 226**

ಸಂಪುಟ: ೧೨ ಸಂಚಿಕೆ: ೧ ಜನವರಿ-ಜೂನ್ ೨೦೨೧

## ಆಯೋಜಿತ ತರಬೇತಿಗಳು /ಕಾರ್ಯಗಾರಗಳು /ಸಮಾವೇಶಗಳು / ವಿಚಾರ ಸಂಕಿರಣಗಳು/ಪ್ರದರ್ಶನಗಳು /ಪಶು ಆರೋಗ್ಯ ಶಿಬಿರಗಳು /ಕ್ಷೇತ್ರ ದಿನಗಳು:

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಭಾರತ ಸರ್ಕಾರದ ಪಶು ಸಂಗೋಪನೆ ಮತ್ತು ಹೈನುಗಾರಿಕೆ ವಿಭಾಗ ಮತ್ತು ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಸಹಯೋಗದೊಂದಿಗೆ 'ಭಾರತದ ಪಶುವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಓಐಇ ವರ್ಚುವಲ್ ಕಾರ್ಯಾಗಾರ'ವನ್ನು ೦೭ ರಿಂದ ೦೯ ಜೂನ್ ೨೦೨೧ ರವರೆಗೆ ಆಯೋಜಿಸಲಾಯಿತು. ಡಾ. ಸುರೇಶ್ ಎಸ್. ಹೊನ್ನಪ್ಪಗೋಳ್, ಪ್ರಾಧ್ಯಾಪಕರು ಕಾರ್ಯಕ್ರಮವನ್ನು ಸಂಯೋಜಿಸಿದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

- ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ರಾಜಗೀರ ಗ್ರಾಮದ ೧೦೫ ರೈತರಿಗೆ 'ವೈಜ್ಞಾನಿಕ ಹೈನುಗಾರಿಕೆ' ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ೦೫ ಜನವರಿ ೨೦೨೧ ರಂದು ಆಯೋಜಿಸಲಾಯಿತು.



- 'ಹಿತ್ತಲು ಕೋಳಿ ಸಾಕಾಣಿಕೆ' ವಿಷಯದ ಕುರಿತು ಒಂದು ದಿನದ ರೈತ ತರಬೇತಿ ಕಾರ್ಯಕ್ರಮವನ್ನು ೧೧ ಜನವರಿ ೨೦೨೧ ರಂದು ಚಿತ್ತ ಗ್ರಾಮದಲ್ಲಿ ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಜಾನುವಾರು ಉತ್ಪಾದನೆ ಮತ್ತು ನಿರ್ವಹಣೆ ವಿಭಾಗ ಮತ್ತು ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಜಂಟಿಯಾಗಿ ಆಯೋಜಿಸಲಾಯಿತು.



- ವೈಜ್ಞಾನಿಕ ಹೈನುಗಾರಿಕೆಯ ಕುರಿತು ಮೂರು ದಿನಗಳ ತರಬೇತಿಕಾರ್ಯಕ್ರಮವನ್ನು ೧೮ ರಿಂದ ೨೦ ಜನವರಿ ೨೦೨೧ ರವರೆಗೆ ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭಾ.ಕೃ.ಸಂ.ಮಂ.– ಪ.ಜಾ.ಉ.ಯೋ ಪ್ರಾಯೋಜಕತ್ವದಲ್ಲಿ ಆಯೋಜಿಸಲಾಯಿತು.



- 'ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ' ಯ ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ೦೪ ರಿಂದ ೦೬ ಫೆಬ್ರವರಿ ೨೦೨೧ ರವರೆಗೆ ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭಾ.ಕೃ.ಸಂ.ಮಂ. ಪ್ರಾಯೋಜಿತ ಪ.ಜಾ. ಉಪ ಯೋಜನೆಯಡಿಯಲ್ಲಿ ಆಯೋಜಿಸಲಾಯಿತು.



- ಪ.ಜಾ. ಉಪ ಯೋಜನೆ ಅನುದಾನದಲ್ಲಿ 'ವೈಜ್ಞಾನಿಕ ಕೋಳಿ ಸಾಕಣೆ' ಕುರಿತು ನಡೆದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತ ಮಹಿಳೆಯರಿಗೆ ಮೂರು ವಾರದ ಗಿರಿರಾಜ ಮರಿಗಳನ್ನು ವಿತರಿಸಲಾಯಿತು.

- 'ವೈಜ್ಞಾನಿಕ ಕೋಳಿ ಸಾಕಾಣಿಕೆ' ವಿಷಯದ ಕುರಿತು ರೈತ ತರಬೇತಿ ಕಾರ್ಯಕ್ರಮವನ್ನು ೧೮ ರಿಂದ ೨೦ ಫೆಬ್ರವರಿ ೨೦೨೧ ರಂದು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜಾನುವಾರು ಉತ್ಪಾದನೆ ಮತ್ತು ನಿರ್ವಹಣೆ ವಿಭಾಗ ಮತ್ತು ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಜಂಟಿಯಾಗಿ ಆಯೋಜಿಸಲಾಗಿದೆ.

## ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

- ‘ಆರೋಗ್ಯಕರ ಪಶುಗಳಿಗಾಗಿ ಉತ್ತಮ ನಿರ್ವಹಣಾ ಪದ್ಧತಿಗಳು’ ಕುರಿತು ತರಬೇತಿ ಕಾರ್ಯಕ್ರಮವನ್ನು ೨೫ ಜನವರಿ ೨೦೨೧ ರಂದು ಪ.ಜಾ.ಉ.ಯೋ./ ಪ.ಪಂ.ಉ.ಯೋ. ಅನುದಾನದಡಿಯಲ್ಲಿ ನಡೆಸಲಾಯಿತು.

- ‘ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ’ ಕುರಿತು ತರಬೇತಿ ಕಾರ್ಯಕ್ರಮವನ್ನು ೧೧ ಫೆಬ್ರವರಿ ೨೦೨೧ ರಂದು ನಡೆಸಲಾಯಿತು.



- ರೈತರ ಅನುಕೂಲಕ್ಕಾಗಿ ‘ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ’ ಕುರಿತು ತರಬೇತಿ ಕಾರ್ಯಕ್ರಮವನ್ನು ೧೦ ರಿಂದ ೧೧ ಫೆಬ್ರವರಿ ೨೦೨೧ ರವರೆಗೆ ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯದ ವಿಸ್ತರಣಾ ಶಿಕ್ಷಣ ಕೇಂದ್ರ ಮತ್ತು ಪಶುಸಂಗೋಪನಾ ವಿಸ್ತರಣಾ ಶಿಕ್ಷಣ ವಿಭಾಗದಿಂದ ಆಯೋಜಿಸಲಾಗಿದೆ.



- ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯದ ಜಾನುವಾರು ಉತ್ಪಾದನೆ ಮತ್ತು ನಿರ್ವಹಣೆ ವಿಭಾಗದಿಂದ ರೈತರಿಗಾಗಿ ವಿವಿಧ ಪಶುಸಂಗೋಪನೆ ವಿಷಯಗಳ ಕುರಿತು ಅಂತರ್ಜಾಲ ತರಬೇತಿ ಕಾರ್ಯಕ್ರಮಗಳ ಸರಣಿಯನ್ನು ೧೬ ರಿಂದ ೨೪ ಜೂನ್ ೨೦೨೧ ರವರೆಗೆ ಆಯೋಜಿಸಲಾಗಿದೆ.











## ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಪ.ಜಾ.ಉ.ಯೋ./ ಪ.ಪಂ.ಉ.ಯೋ. ಘಟಕದ ಸಂಯೋಜನೆಯಲ್ಲಿ ೧೨ ರಿಂದ ೧೩ ಜನವರಿ ೨೦೨೧ ರವರೆಗೆ ಜರುಗಿದ ‘ಆಡಳಿತಾತ್ಮಕ ತರಬೇತಿ’ಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಎಚ್.ಡಿ. ನಾರಾಯಣಸ್ವಾಮಿ ಅವರು ಉದ್ಘಾಟಿಸಿ ಮಾತನಾಡಿದರು.




- ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ’ವೈಜ್ಞಾನಿಕ ಹಂದಿ ಸಾಕಣೆ’ ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮವು ೧೧ ರಿಂದ ೧೩ ಫೆಬ್ರವರಿ ೨೦೨೧ ರವರೆಗೆ ನಡೆಯಿತು.

- ೨೦೨೧ ರ ಫೆಬ್ರವರಿ ೧೮ ಮತ್ತು ೧೯ ರಂದು ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ’ವೈಜ್ಞಾನಿಕ ಕುರಿ ಸಾಕಣೆ’ ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮ ನಡೆಯಿತು.



- ‘ಸುಸ್ಥಿರ ಜಾನುವಾರು ಸಾಕಣೆಗಾಗಿ ಮೇವು ಉತ್ಪಾದನೆ ಮತ್ತು ಸಂರಕ್ಷಣೆ’ ಕುರಿತು ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ೦೨ ರಿಂದ ೦೪ ಮಾರ್ಚ್ ೨೦೨೧ ರವರೆಗೆ ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆಸಲಾಯಿತು.

- ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದ ಬೋಧನಾ ಸಿಬ್ಬಂದಿಗೆ ಒಂದು ದಿನದ ಆಡಳಿತಾತ್ಮಕ ತರಬೇತಿಯನ್ನು ೦೩ ಮಾರ್ಚ್ ೨೦೨೧ ರಂದು ಪ.ಪಂ.ಉ.ಯೋ. ಘಟಕದ ಸಂಯೋಜನೆಯಡಿಯಲ್ಲಿ ನಡೆಸಲಾಯಿತು.

## ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ಗದಗ ತಾಲೂಕಿನ ಲಕ್ಕುಂಡಿ ಗ್ರಾಮದಲ್ಲಿ ೨೯ ಜನವರಿ ೨೦೨೧ ರಂದು ಗದಗಿನ ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ 'ವೈಜ್ಞಾನಿಕ ಜಾನುವಾರು ಉತ್ಪಾದನಾ ಪದ್ಧತಿಗಳು' ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



- ಸಂಭಾಪುರ ಮತ್ತು ಸುತ್ತಮುತ್ತಲಿನ ಹಳ್ಳಿಗಳ ೮೦ ರೈತರಿಗೆ 'ವೈಜ್ಞಾನಿಕ ಪಶುಸಂಗೋಪನೆ ಪದ್ಧತಿಗಳು' ಕುರಿತು ಮೂರು ದಿನಗಳ ತರಬೇತಿಯನ್ನು ೦೧ ರಿಂದ ೦೩ ಮಾರ್ಚ್ ೨೦೨೧ ರವರೆಗೆ ಪ.ಪಂ.ಉ.ಯೋ. ಅನುದಾನದಲ್ಲಿ ನಡೆಸಲಾಯಿತು.



- ಗದಗಿನ ಪಶುವೈದ್ಯಕೀಯ ಮಹಾವಿದ್ಯಾಲಯ ಹಾಗೂ ಜಾ.ಸಂ.ಮಾ.ಕೇಂ., ಹಳ್ಳಿಖೇಡ, ಬೀದರನ ಸಹಯೋಗದೊಂದಿಗೆ ರೈತರಿಗಾಗಿ 'ಜಾನುವಾರುಗಳಲ್ಲಿ ಗರ್ಭಧಾರಣೆ, ಬಂಜೆತನ ಮತ್ತು ಅದರ ನಿರ್ವಹಣೆ' ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ೩೦ ಜೂನ್ ೨೦೨೧ ರಂದು ನಡೆಸಲಾಯಿತು.

## ಹೈನು ವಿಜ್ಞಾನ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು

- ಮೌಲ್ಯವರ್ಧಿತ ಹೈನು ಉತ್ಪನ್ನಗಳ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಡಿಯ ಮಂಡ್ಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ೧೬ ರಿಂದ ೧೮ ಫೆಬ್ರವರಿ ೨೦೨೧ ರವರೆಗೆ ಹೈನು ತಂತ್ರಜ್ಞಾನ ವಿಭಾಗದಿಂದ ನಡೆಸಲಾಯಿತು.



## ಹೈನು ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ

- ಹೈನು ತಾಂತ್ರಿಕತೆ ವಿಭಾಗದ ವಿಸ್ತರಣಾ ಚಟುವಟಿಕೆಗಳ ಅಡಿಯಲ್ಲಿ ಕಲಬುರಗಿ ಜಿಲ್ಲೆಯ ವಿವಿಧ ಗ್ರಾಮಗಳ ೪೦ ರೈತರಿಗೆ 'ಮೌಲ್ಯವರ್ಧಿತ ಹೈನು ಉತ್ಪನ್ನಗಳು' ಕುರಿತು ೧೧ ರಿಂದ ೧೩ ಫೆಬ್ರವರಿ ೨೦೨೧ ರವರೆಗೆ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು.



- ಹೈನು ಇಂಜಿನಿಯರಿಂಗ್ ವಿಭಾಗವು ಕಲಬುರಗಿ ಜಿಲ್ಲೆಯ ವಿವಿಧ ಗ್ರಾಮಗಳ ೪೦ ರೈತರಿಗೆ ೦೮ ರಿಂದ ೧೦ ಫೆಬ್ರವರಿ ೨೦೨೧ ರವರೆಗೆ ಪ.ಜಾ.ಉ.ಯೋ/ಪ.ಪಂ.ಉ.ಯೋ. ಅನುದಾನದಲ್ಲಿ 'ಸಣ್ಣ-ಪ್ರಮಾಣದ ಹೈನು ಉದ್ಯಮಗಳಲ್ಲಿ ಬಳಸುವ ಸಂಸ್ಕರಣಾ ಸಲಕರಣೆಗಳ ಪಾತ್ರ' ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ.



## ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- 'ಒಣ ಮೀನು ಸಂಸ್ಕರಣೆಯ ಸುಧಾರಿತ ವಿಧಾನಗಳು' ಕುರಿತು ತರಬೇತಿ ಕಾರ್ಯಕ್ರಮವನ್ನು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ೧೫ ರಿಂದ ೧೮ ಜನವರಿ ೨೦೨೧ ರವರೆಗೆ ಆಯೋಜಿಸಲಾಗಿದೆ.



## ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ, ಕೊಡಗು

- ಕೊಡಗು ಜಿಲ್ಲೆಯ ರೈತರಿಗಾಗಿ 'ಮಾನವ–ವನ್ಯಜೀವಿ ಸಂಘರ್ಷ ಮತ್ತು ಅದರ ತಡೆಗಟ್ಟುವಿಕೆ' ಕುರಿತು ತರಬೇತಿ ಕಾರ್ಯಕ್ರಮವನ್ನು ೧೨ ಫೆಬ್ರವರಿ ೨೦೨೧ ರಂದು ನಡೆಸಲಾಯಿತು.




## ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಕೋನೆಹಳ್ಳಿ, ತುಮಕೂರು

- 'ಹೈನುಗಾರಿಕೆಯಲ್ಲಿ ಉದ್ಯಮಶೀಲತೆ: ಆಧುನಿಕ ದೃಷ್ಟಿಕೋನ' ಕುರಿತು ಕಾರ್ಯಾಗಾರವನ್ನು ಕಲ್ಪತರು ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ತಿಪಟೂರಿನ ಎಂಬಿಎ ವಿದ್ಯಾರ್ಥಿಗಳಿಗೆ ೧೦ ಮಾರ್ಚ್ ೨೦೨೧ ರಂದು ಜಾ.ಸಂ.ಮಾ.ಕೇಂ.(ಅ), ಕೋನೇಹಳ್ಳಿಯಲ್ಲಿ ಆಯೋಜಿಸಲಾಯಿತು.

## ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ನಾಗಮಂಗಲ

- ಜಾ.ಸಂ.ಮಾ.ಕೇಂ. (ಕುರಿ) ನಾಗಮಂಗಲದಲ್ಲಿ ೧೬ ಜನವರಿ ೨೦೨೧ ರಂದು ಜರುಗಿದ 'ವೈಜ್ಞಾನಿಕ ಮತ್ತು ಲಾಭದಾಯಕ ಕುರಿ ಸಾಕಾಣಿಕೆ' ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತರಿಗೆ ಕುದುರೆ ಮೆಂತೆ (ಲೂಸರ್ನ್) ಹಸಿರು ಮೇವಿನ ಬೆಳೆಯನ್ನು ಪ್ರದರ್ಶಿಸಲಾಯಿತು.



- ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಮಹಿಳಾ ಫಲಾನುಭವಿಗಳಿಗೆ 'ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ' ಕುರಿತು ಒಂದು ದಿನದ ತರಬೇತಿಯನ್ನು ೩೦ ಜನವರಿ ೨೦೨೧ ರಂದು ಜಾ.ಸಂ.ಮಾ.ಕೇಂ. (ಕುರಿ) ನಾಗಮಂಗಲದಲ್ಲಿ ಆಯೋಜಿಸಲಾಗಿದೆ.



## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಅಂಕೋಲಾ–ಉತ್ತರ ಕನ್ನಡ

- 'ಕೃಷಿ ಹೊಂಡ ಮತ್ತು ಕೊಳಗಳಲ್ಲಿ ಮೀನು ಸಾಕಣೆ' ಕುರಿತು ಎರಡು ದಿನಗಳ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ೨೧ ರಿಂದ ೨೨ ಜನವರಿ ೨೦೨೧ ರವರೆಗೆ ನಡೆಸಲಾಯಿತು.

- 'ಕೃಷಿ ಹೊಂಡ ಮತ್ತು ಕೊಳಗಳಲ್ಲಿ ಮೀನು ಸಾಕಣೆ' ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ೦೩ ಫೆಬ್ರವರಿ ೨೦೨೧ ರಂದು ನಡೆಸಲಾಯಿತು ಮತ್ತು ಪ್ರಾಯೋಜಕರಾದ ಕುಮಟಾ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಮೀನು ಬೀಜ ಲಭ್ಯತೆಯ ಮಾಹಿತಿಯನ್ನು ರೈತರಿಗೆ ಪ್ರಚಾರ ಮಾಡಲಾಯಿತು.

- ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ೫೦ ಮೀನು ರೈತರಿಗೆ ಕಾರವಾರ ಮೀನುಗಾರಿಕೆ ಇಲಾಖೆಯ ಆತ್ಮ ಯೋಜನೆಯಡಿ ೨೯ ಜನವರಿ ೨೦೨೧ ರಂದು ಮೀ.ಸಂ.ಮಾ.ಕೇಂ.(ಒ), ಅಂಕೋಲಾದಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.





## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ–ವಿಜಯಪುರ

- ಗ್ರಾಮೀಣ/ನಗರ ಮಹಿಳೆಯರ ಸಬಲೀಕರಣಕ್ಕಾಗಿ 'ಮೌಲ್ಯವರ್ಧಿತ ಮೀನು ಉತ್ಪನ್ನಗಳ ತಯಾರಿಕೆ' ಕುರಿತು ಪ್ರಾತ್ಯಕ್ಷಿಕೆಯನ್ನು ಭೂತನಾಳದ ಮೀ.ಸಂ.ಮಾ. ಕೇಂದ್ರದಲ್ಲಿ ೨೭ ಮತ್ತು ೨೮ ಜನವರಿ ೨೦೨೧ ರಂದು ಆಯೋಜಿಸಲಾಗಿದೆ.



- ಭೂತನಾಳದ ಮೀ.ಸಂ.ಮಾ. ಕೇಂದ್ರದಲ್ಲಿ 'ವೈಜ್ಞಾನಿಕ ಮೀನು ಸಾಕಾಣಿಕೆ' ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ೨೯.೦೧.೨೦೨೧ ರಂದು ನಡೆಸಲಾಯಿತು.

- ಸಮೇತಿ (ಉತ್ತರ), ಕೃಷಿ ವಿಶ್ವವಿದ್ಯಾಲಯ, ಧಾರವಾಡ ಮತ್ತು ವಿಸ್ತರಣಾ ನಿರ್ದೇಶನಾಲಯ, ಕಪಪಮೀವಿವಿ, ಬೀದರ ಸಹಯೋಗದೊಂದಿಗೆ ಆತ್ಮ ಯೋಜನೆ ಅಡಿಯಲ್ಲಿ ಉತ್ತರ ಕರ್ನಾಟಕದ ೧೩ ಜಿಲ್ಲೆಗಳ ಕೃಷಿ ಇಲಾಖೆ ಮತ್ತು ಸಂಬಂಧಿತ ವಲಯಗಳ ೫೮ ವಿಸ್ತರಣಾ ಕಾರ್ಯಕರ್ತರಿಗೆ 'ಕೃಷಿ ಹೊಂಡ ಮತ್ತು ಕೊಳಗಳಲ್ಲಿ ಮೀನು ಸಾಕಣೆ' ಕುರಿತು ಎರಡು ದಿನಗಳ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

- ವಿಜಯಪುರದ ಸೆಕಾಬ್ ವಿಜ್ಞಾನ ಮತ್ತು ಕಲಾ ಕಾಲೇಜಿನ ಪ್ರಾಣಿಶಾಸ್ತ್ರ ಮತ್ತು ಗೃಹ ವಿಜ್ಞಾನ ವಿಭಾಗದ ಮೂರನೇ ವರ್ಷದ ಬಿಎಸ್ಸಿಯ ೩೩ ವಿದ್ಯಾರ್ಥಿಗಳಿಗೆ 'ಜಲಕೃಷಿಯ ಪ್ರಸ್ತುತ ಸನ್ನಿವೇಶ ಮತ್ತು ಅದರ ವ್ಯಾಪ್ತಿ' ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.





## ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ

- ಸೂಳ್ಯ ತಾಲೂಕಿನ ಅಜ್ಜಾವರ ಗ್ರಾಮದಲ್ಲಿ ೨೩ ಏಪ್ರಿಲ್ ೨೦೨೧ ರಂದು ೪೦ ಪಿಕೆವಿವೈ ಫಲಾನುಭವಿ ರೈತರಿಗಾಗಿ 'ದ್ರವ ಸಾವಯವ ಗೊಬ್ಬರಗಳ ಉತ್ಪಾದನಾ ತಂತ್ರಜ್ಞಾನಗಳು' ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು ಮತ್ತು ಪ್ಲಾಸ್ಟಿಕ್ ಡ್ರಮ್‌ಗಳನ್ನು ವಿತರಿಸಲಾಯಿತು. ಪಂಚಗವ್ಯ, ಬೀಜಾಮೃತ, ಜೀವಾಮೃತ ಮತ್ತು ಘನ ಜೀವಾಮೃತದ ಸಿದ್ಧತೆಯನ್ನು ಎಲ್ಲಾ ಪಿಕೆವಿವೈ ರೈತರಿಗೆ ಪ್ರದರ್ಶಿಸಲಾಯಿತು ಮತ್ತು ಯಾವುದೇ ರಾಸಾಯನಿಕ ಅವಶೇಷಗಳಿಲ್ಲದೆ ಬೆಳೆ ಉತ್ಪಾದಿಸಲು ಸಾಂಪ್ರದಾಯಿಕ ವಿಧಾನದಲ್ಲಿ ಈ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದನ್ನು ವಿವರಿಸಲಾಯಿತು.



- ಬಂಟ್ವಾಳ ತಾಲ್ಲೂಕಿನ ಕೆಡ್ಡಳಿಕೆ ಗ್ರಾಮದಲ್ಲಿ ಕುಟುಂಬಗಳಲ್ಲಿ ಸಮತೋಲಿತ ಆಹಾರದ ಮಹತ್ವದ ಬಗ್ಗೆ ಅರಿವು ಮೂಡಿಸಲು ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಹಾಗೂ ಮಣಿಪಾಲದ ಭಾರತೀಯ ವಿಕಾಸ ಟ್ರಸ್ಟ್ ಸಹಯೋಗದೊಂದಿಗೆ ೦೮ ಏಪ್ರಿಲ್ ೨೦೨೧ ರಂದು 'ಪೋಷಣೆ–ಉದ್ಯಾನವನ (ನ್ಯೂಟ್ರಿ–ಗಾರ್ಡನ್)' ಕಾರ್ಯಕ್ರಮವನ್ನು ಆಯೋಜಿಸಲಾಯಿತು ಹಾಗೂ ಆಯ್ದ ರೈತರಿಗೆ ವಿವಿಧ ಜಾತಿಯ ಹಣ್ಣು ಮತ್ತು ತರಕಾರಿ ಗಿಡಗಳನ್ನು ವಿತರಿಸಲಾಯಿತು.

## ಇತರೆ ಆಯೋಜಿತ ಕಾರ್ಯಕ್ರಮಗಳು:

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

- ಜಾನುವಾರು ಉತ್ಪಾದನೆ ಮತ್ತು ನಿರ್ವಹಣೆಯ ವಿಭಾಗದಲ್ಲಿ ಭಾ.ಕೃ.ಸಂ.ಮಂ.–ಪ.ಜಾ.ಉ.ಯೋ. ಅನುದಾನದಡಿಯಲ್ಲಿ ನಿರ್ಮಾಣಗೊಳ್ಳುವ ಗ್ರೋವರ್ ಮತ್ತು ಬ್ರೂಡರ್ ಶೆಡ್‌ಗಳ ಅಡಿಗಲ್ಲು ಸಮಾರಂಭವನ್ನು ೧೨ ನೇ ಫೆಬ್ರವರಿ ೨೦೨೧ ರಂದು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಡೀನ್‌ರವರು ನೆರವೇರಿಸಿದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ಹೊನ್ನೇನಹಳ್ಳಿ, ರಾಮಜಿಹಳ್ಳಿ, ಕಿತ್ತನಕೆರೆ, ತಿಮ್ಮೇನಹಳ್ಳಿ ಮತ್ತು ಹಾಸನ ಜಿಲ್ಲೆಯ ಇತರೆ ಗ್ರಾಮಗಳಲ್ಲಿ ನಬಾರ್ಡ್ ಯೋಜನೆಯಡಿ ಕೋಳಿಮರಿ ಸಮುದಾಯ ಬ್ರೂಡಿಂಗ್ ಕೇಂದ್ರಗಳನ್ನು ೨೧ ಮಾರ್ಚ್ ೨೦೨೧ ರಂದು ಸ್ಥಾಪಿಸಲಾಯಿತು ಮತ್ತು ಈ ಯೋಜನೆಯಡಿಯಲ್ಲಿ ೧೫೦೦ ದೇಶಿ ಕೋಳಿ ಮರಿಗಳನ್ನು ಮಹಿಳಾ ಸ್ವಸಹಾಯ ಗುಂಪು ಫಲಾನುಭವಿಗಳಿಗೆ ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿತರಿಸಲಾಯಿತು.




- ವಿಶ್ವ ಪರಿಸರ ದಿನಾಚರಣೆಯನ್ನು ೦೫ ಜೂನ್ ೨೦೨೧ ರಂದು ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಂದ ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು.

- ಹಾಸನದ ಪಶುವೈದ್ಯಕೀಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕವು ೨೧ ಜೂನ್ ೨೦೨೧ ರಂದು ಬೆಳಗಿನ ೦೯.೩೦ ರಿಂದ ೧೦.೩೦ ವರೆಗೆ ಝೂಮ್ ವೇದಿಕೆ ಮೂಲಕ ೭ನೇ ಅಂತರಾಷ್ಟ್ರೀಯ ಯೋಗ ದಿನದಂದು 'ಆರೋಗ್ಯಕ್ಕಾಗಿ ಯೋಗ' ಕಾರ್ಯಕ್ರಮದ ಆಯೋಜನೆಯೊಂದಿಗೆ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ಆನ್‌ಲೈನ್ ಯೋಗಾಭ್ಯಾಸವನ್ನು ಆಯೋಜಿಸಲಾಯಿತು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ವಿಶ್ವ ಪರಿಸರ ದಿನವನ್ನು ಗದಗನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ೦೫ ಜೂನ್ ೨೦೨೧ ರಂದು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ಆವರಣದಲ್ಲಿ ೪೦೦ ಕ್ಕೂ ಅಧಿಕ ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು.



### ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯದ ಸಂಶೋಧನೆ ಮತ್ತು ಬೋಧನಾ ಮೀನು ಸಾಕಣೆ ಕೇಂದ್ರದಲ್ಲಿ ಸಮಗ್ರ ಕೃಷಿ ಪದ್ಧತಿಯಡಿಯಲ್ಲಿ ಮೀನು–ತೋಟಗಾರಿಕಾ ಬೆಳೆಯಾಗಿ ಮೀನು ಕೊಳದ ನೀರನ್ನು ಬಳಸಿ ಮಲಬಾರ್ ಪಾಲಕವನ್ನು ಬೆಳೆಸಲಾಗುತ್ತಿದೆ.

### ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹಳ್ಳಿಖೇಡ-ಬೀದರ

- ಸನ್ಮಾನ್ಯ ಶ್ರೀ. ಪ್ರಭು ಬಿ. ಚವ್ಹಾಣ್, ಪಶುಸಂಗೋಪನೆ ಮಂತ್ರಿಗಳು ಮತ್ತು ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳು ಅವರು ೨೯ ಜೂನ್ ೨೦೨೧ ರಂದು ಜಾ.ಸಂ.ಮಾ.ಕೇಂ.(ದೇ), ಹಳ್ಳಿಖೇಡ, ಬೀದರ ಸಂಸ್ಥೆಯ ಕಾರ್ಯಚಟುವಟಿಕೆಗಳ ವಿಶ್ಲೇಷಣೆಗಾಗಿ ಭೇಟಿ ನೀಡಿದರು. ಸಂಸ್ಥೆಯ ಉದ್ದೇಶಿತ ಅಭಿವೃದ್ಧಿ ಚಟುವಟಿಕೆಗಳು ಮತ್ತು ಸುಸ್ಥಿರ ಜೀವನೋಪಾಯಕ್ಕಾಗಿ ದೇಶಿ ಜಾನುವಾರುಗಳು ವಿಶೇಷವಾಗಿ ದೇವಣಿ ತಳಿಯ ಹಸುಗಳ ಮಹತ್ವದ ಬಗ್ಗೆ ಸಚಿವರು ಚರ್ಚಿಸಿದರು.




### ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ನಾಗಮಂಗಲ-ಮಂಡ್ಯ

- ನಾಗಮಂಗಲದ ಜಾ.ಸಂ.ಮಾ.ಕೇಂ.(ಕು) ೨೦೨೦-೨೧ನೇ ಸಾಲಿನ ಬೃಹತ್ ಕುರಿ ಬೀಜ ಯೋಜನೆ (ಮಂಡ್ಯ ಕುರಿ) ಅಡಿಯಲ್ಲಿ ಟಗರು ವಿತರಣಾ ಕಾರ್ಯಕ್ರಮವನ್ನು ಗೌರವಾನ್ವಿತ ಕುಲಪತಿಗಳಾದ ಪ್ರೊ. ಹೆಚ್.ಡಿ. ನಾರಾಯಣಸ್ವಾಮಿ ಅವರು ಉದ್ಘಾಟಿಸಿದರು ಹಾಗೂ ಎಂಎಸ್ಎಸ್ಪಿ ಅಡಿಯಲ್ಲಿ ಆಯ್ದ ೨೦ ಫಲಾನುಭವಿ ರೈತರಿಗೆ ಮಂಡ್ಯ ತಳಿಯ ೨೦ ಶ್ರೇಷ್ಠ ಟಗರುಗಳನ್ನು ವಿತರಿಸಿದರು.



### ಶ್ವಾನ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ತಿಮ್ಮಾಪುರ, ಮುಧೋಳ

- ಉತ್ತರ ಪ್ರದೇಶದ ಆಗ್ರಾ ವಾಯುಪಡೆ ಕೇಂದ್ರಕ್ಕೆ ನಾಲ್ಕು ಮುಧೋಳ ತಳಿಯ ನಾಯಿಮರಿಗಳನ್ನು ಶ್ವಾಸಂ.ಮಾ.ಕೇಂ., ತಿಮ್ಮಾಪುರ, ಮುಧೋಳದಿಂದ ೧೨ ಫೆಬ್ರವರಿ ೨೦೨೧ ರಂದು ಮಾನ್ಯ ಜಲಸಂಪನ್ಮೂಲ ಸಚಿವರಾದ ಶ್ರೀ ಗೋವಿಂದ ಕಾರಜೋಳ ರವರು ಹಸ್ತಾಂತರಿಸಿದರು.



## ಪ್ರಶಸ್ತಿಗಳು/ ಮನ್ನಣೆಗಳು:

- ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ೨೫ ಮತ್ತು ೨೬ ಫೆಬ್ರವರಿ ೨೦೨೧ ರಂದು ಜರುಗಿದ 'ಡಿಜಿಟಲ್ ಸಂಪರ್ಕಜಾಲ ಪರಿಸರದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರಗಳ ನಿರ್ವಹಣೆ: ಪ್ರವೃತ್ತಿಗಳು, ಸವಾಲುಗಳು ಮತ್ತು ಅವಕಾಶಗಳು'- ಕೃಷಿ ಗ್ರಂಥಾಲಯಗಳು ಮತ್ತು ಬಳಕೆದಾರ ಸಮುದಾಯದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ (ಐಸಿಎಎಲ್ಎಕೆ-೨೦೨೧) ಅತ್ಯುತ್ತಮ ಲೇಖನ ಪ್ರಸ್ತುತಿಯನ್ನು ಡಾ. ಯುಎಸ್ ಜಾಧವ್ ಅವರಿಗೆ ನೀಡಲಾಗಿದೆ.




ಸಂಪಾದಕರು ಮತ್ತು ಪ್ರಕಾಶಕರು :

**ಡಾ. ಎನ್.ಎ. ಪಾಟೀಲ**

ವಿಸ್ತರಣಾ ನಿರ್ದೇಶಕರು
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಅಂಚೆ ಸಂ. 06, ನಂದಿನಗರ, ಬೀದರ-585 226
ಕರ್ನಾಟಕ, ಭಾರತ
ದೂ. : 08482-245313; ಮೊಬೈಲ್ : 9448604646
ಇ-ಮೇಲ್ : dekvafsu@gmail.com


ತೆರೆದ-ಅಂಚೆ

ಮುದ್ರಿತ ವಿಷಯ

ಗೆ,

ವಿತರಣೆವಾಗಿಲ್ಲದಿದ್ದರೆ ದಯವಿಟ್ಟು ಈ ವಿಳಾಸಕ್ಕೆ ಹಿಂದುರುಗಿಸಿ :
**ವಿಸ್ತರಣಾ ನಿರ್ದೇಶಕರು**
**ಕಪಪಮೀವಿವಿ**, ಅಂಚೆ ಸಂ. 6,
ನಂದಿನಗರ, ಬೀದರ-585 226. ಕರ್ನಾಟಕ

